ಈ) ಪ್ರಸ್ತುತ ಜಾರಿಯಲ್ಲಿರುವ ಸಿಬ್ಬಂದಿ ಮಾದರಿ ರಚನೆಯಂತೆ ಬೋಧಕೇತರ ಹುದ್ದೆಗಳಿಗೆ ಅನುಮೋದನೆ ನೀಡಲಾಗುವುದು. ಸಧ್ಯಕ್ಕೆ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುತ್ತದೆ. ಈ ಆದೇಶವನ್ನು ಸಡಿಲಿಸಿದ ನಂತರ ಈ ಬಗ್ಗೆ ಕ್ರಮವಹಿಸಲಾಗುವುದು.

ಉ) ಆಡಳಿತ ಮಂಡಳಿಯವರು ತಾತ್ಕಲಿಕ ವ್ಯವಸ್ಥೆ ಮಾಡಿಕೊಳ್ಳುವುದರಿಂದ ಆಡಚಣೆ ಆಗುವುದಿಲ್ಲ.

ಊ) ಪ್ರಸ್ತುತ ಜಾರಿಯಲ್ಲಿರುವ ಸಿಬ್ಬಂದಿ ಮಾದರಿಯ ರಚನೆಯಂತೆ ಪ್ರೌಢಶಾಲೆಗಳಿಗೆ ಒಂದು ದ್ವಿತೀಯ ದರ್ಜೆ ಸಹಾಯಕ ಹಾಗೂ ಒಂದು ಗ್ರೂಪ್–ಡಿ ಹುದ್ದೆಗೆ ಅವಕಾಶವಿದೆ. ಪದವಿ ಪೂರ್ವ ಕಾಲೇಜುಗಳಲ್ಲಿ ಒಂದು ಪ್ರಥಮ ದರ್ಜೆ ಸಹಾಯಕ / ದ್ವಿತೀಯ ದರ್ಜೆ ಸಹಾಯಕ ಮತ್ತು ಒಂದು ಗ್ರೂಪ್–ಡಿ ಹುದ್ದೆಗಳನ್ನು ತುಂಬಲು ಮಾತ್ರ ಅವಕಾಶವಿದೆ.

ಋ) ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ ಸದರಿ ಆದೇಶವನ್ನು ಸಡಿಲಿಸಿದ ನಂತರ ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗೆದು ಕೊಳ್ಳಲಾಗುವುದು.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಕಳ್ಳಭಟ್ಟಿ ದುರಂತದ ಬಗ್ಗೆ

268 (587) : ಶ್ರೀ ಬಚ್ಚೇಗೌಡ ಕೆ.ಪಿ. (ಚಿಕ್ಕಬಳ್ಳಾಪುರ) : ಮಾನ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕಳ್ಳಬಟ್ಟಿ ಕುಡಿದು ಅಮಾಯಕ ಜನರು ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಳ್ಳಭಟ್ಟಿ ದುರಂತದಿಂದ ಸತ್ತವರ ಸಂಖ್ಯೆ ಎಷ್ಟು ಮತ್ತು ಯಾರ್ಯಾರು (ವಿವರಗಳನ್ನು ನೀಡುವುದು);

ಇ) ಕಳ್ಳಭಟ್ಟಿ ದುರಂತಕ್ಕೆ ಕಾರಣರಾದವನ್ನು ಸರ್ಕಾರ ಬಂಧಿಸಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣರಾದವರ ವಿರುದ್ಧ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ.

ಉ) ಕಳ್ಳಭಟ್ಟಿ ದುರಂತದಿಂದ ಸತ್ತವರ ಕುಟುಂಬಗಳಿಗೆ ಸರ್ಕಾರ ಪರಿಹಾರ ಧನವನ್ನು ನೀಡಿದೆಯೇ;

ಊ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದಲ್ಲಿ ಪರಿಹಾರವನ್ನು ನೀಡಲಾಗಿದೆ (ವಿವರಗಳನ್ನು ನೀಡುವುದು);

ಋ) ರಾಜ್ಯದಲ್ಲಿ ಇನ್ನು ಮುಂದೆ ಕಳ್ಳಬಟ್ಟಿ ತಯಾರಿಕೆಯ ಹಾವಳಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರಗಳನ್ನು ನೀಡುವುದು)?

ಶ್ರೀ ಎಂ.ಪಿ. ರೇಣುಕಾಚಾರ್ಯ (ಅಬಕಾರಿ ಸಚಿವರು) :

ಅ) ಬಂದಿದೆ.

ಆ) ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಅಮ್ಮಗಾರಿ ಪೇಟೆಯಲ್ಲಿ ದಿನಾಂಕ: 04.02.2010 ರಂದು ಐವರು ಮೃತಪಟ್ಟಿದ್ದು, ವಿವರಗಳು ಕೆಳಕಂಡಂತೆ ಇವೆ.

1. ಭಜಂತ್ರಿ ವೆಂಕಟರಮಣ ಬಿನ್ ಲೇಟ್ ಚೆಂಗಪ್ಪ, 70 ವರ್ಷ, ಭಜಂತ್ರಿ ಕೆಲಸ, ಅಮ್ಮಗಾರಿಪೇಟೆ.
2. ನಾರಾಯಣ ಸ್ವಾಮಿ ಬಿನ್ ಲೇಟ್ ಗಂಗೂಲಪ್ಪ, 55 ವರ್ಷ, ನಾಯಕರು, ಜಿರಾಯ್ತಿ ಕೆಲಸ, ಅಮ್ಮಗಾರಿಪೇಟೆ.
3. ವೆಂಕಟಪ್ಪ ಬಿನ್ ಲೇಟ್ ಗಂಗಪ್ಪ, 65 ವರ್ಷ, ನೀರಗಟ್ಟಿ ಕೆಲಸ, ಅಮ್ಮಗಾರಿಪೇಟೆ.
4. ಕೊಂಡಪ್ಪ ಬಿನ್ ಲೇಟ್ ಕುಂಟಿ ಕದಿರಪ್ಪ, 65 ವರ್ಷ, ಕಲ್ಲು ಕೆಲಸ, ಕೊತ್ತಪೇಟೆ.
5. ರೆಡ್ಡಪ್ಪ, 55 ವರ್ಷ, ಭೋವಿ ಜನಾಂಗ, ಕಲ್ಲು ಕೆಲಸ, ಚೀಕಲಗುಟ್ಟ, ಮದನಪಲ್ಲಿ ತಾಲ್ಲೂಕು, ಆಂಧ್ರಪ್ರದೇಶ.

ಇ) ಈವರೆವಿಗೂ ಯಾರನ್ನೂ ಬಂಧಿಸಿರುವುದಿಲ್ಲ. ಈ ಸಂಬಂಧವಾಗಿ ರಾಯಲ್ಪಾಡು ಪೊಲೀಸ್ ಠಾಣೆಯಲ್ಲಿ ಪ್ರಥಮ ಮಾಹಿತಿ ವರದಿ ಸಂಖ್ಯೆ: 7/05-02-2010 ರಂತೆ ಮೊಕದ್ದಮೆ ದಾಖಲಿಸಲಾಗಿದ್ದು, ಈ ಘಟನೆಗೆ ಕಾರಣರಾದವರನ್ನು ಪತ್ತೆ ಮಾಡಿ ಕಾನೂನುರೀತ್ಯ ಕ್ರಮ ಕೈಗೊಳ್ಳುವ ಸಂಬಂಧ ತನಿಖೆ ಮುಂದುವರಿದಿರುತ್ತದೆ.

ಈ) ಈ ಘಟನೆಯ ತನಿಖೆಯನ್ನು ಆರಕ್ಷಕ ಉಪ ಅಧೀಕ್ಷಕರು, ಕೋಲಾರ ಉಪ ವಿಭಾಗ ನಡೆಸುತ್ತಿದ್ದು, ವಿಧಿವಿಜ್ಞಾನ ಪ್ರಯೋಗಾಲ

ಯದಿಂದ ವರದಿ ಬಂದ ನಂತರ ಸಾವಿಗೆ ನಿಖರವಾದ ಕಾರಣಗಳು ತಿಳಿದು, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ.

ಊ) ಅಸ್ವಾಭಾವಿಕ ಮರಣವನ್ನಪ್ಪಿದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು ಶವ ಸಂಸ್ಕಾರಕ್ಕಾಗಿ ತಲಾ ರೂ.1,000/– ನಂತೆ ಮೃತರ ಅವಲಂಭಿತರಿಗೆ ನೀಡಿರುತ್ತಾರೆ.

ಋ) ಅಬಕಾರಿ ಕಾನೂನಿನಡಿಯಲ್ಲಿ ಯಾವುದೇ ಪರಿಹಾರವನ್ನು ನೀಡಲು ಅವಕಾಶವಿರುವುದಿಲ್ಲ.

ಋ) ಇಲಾಖೆಯು ಜಾರಿ ಮತ್ತು ತನಿಖಾ ಚಟುವಟಿಕೆಗಳನ್ನು ಚುರುಕುಗೊಳಿಸಲು ಕ್ರಮಕೈಗೊಂಡಿದೆ.

ರಾಜ್ಯಾದ್ಯಾಂತ ಇರುವ 6002 ಪಂಚಾಯಿತಿಗಳಲ್ಲಿ ಗ್ರಾಮಸಭೆ ಗಳನ್ನು ನಡೆಸಿ, ನಕಲಿ/ವಿಷಪೂರಿತ ಮಧ್ಯ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲಾಗಿದೆ. ಭಿತ್ತಿಪತ್ರಗಳನ್ನು ಸಹ ಹಂಚಲಾಗಿದೆ. 1890 ಮಾರ್ಗಗಳನ್ನು ರಚಿಸಲಾಗಿದ್ದು, 14363 ಪಾಯಿಂಟ್ ಪುಸ್ತಕಗಳನ್ನು ನಿರ್ವಹಿಸಲಾಗಿದೆ.

ಅಬಕಾರಿ ಪ್ರಕರಣಗಳಲ್ಲಿ ಆರೋಪಿತಗಳಾಗಿರುವ 21363 ಜನರ ಚಲನವಲನಗಳ ಮೇಲೆ ನಿಗಾ ಇಡಲಾಗಿದೆ ಹಾಗೂ ಸನ್ನದು ಮಳಿಗೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಚಲನವಲನಗಳ ಮೇಲೂ ಸಹ ನಿಗಾ ಇಡಲಾಗಿದೆ.

ಕರ್ನಾಟಕ ಅಬಕಾರಿ ಕಾಯ್ದೆ ಕಲಂ 50ರ ಪ್ರಕಾರ ಚುನಾಯಿತ ಪ್ರತಿನಿಧಿಗಳು, ರಾಜ್ಯಸ್ವ ಇಲಾಖಾ ಅಧಿಕಾರಿಗಳು, ಸ್ತ್ರೀ ಶಕ್ತಿ ಸಂಘ ಮತ್ತು ಯುವಕ ಸಂಘಗಳಿಗೆ ಅಬಕಾರಿ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಲು ನೋಟೀಸು ನೀಡಲಾಗಿರುತ್ತದೆ.

ಗುರ್ತಿಸಲಾಗಿರುವ ಕಳ್ಳಭಟ್ಟಿ ಕೇಂದ್ರಗಳ ಮೇಲೆ ನಿರಂತರವಾಗಿ ದಾಳಿಗಳನ್ನು ನಡೆಸಲಾಗುತ್ತಿದೆ.

ರಾಜ್ಯದಲ್ಲಿ ಅಕ್ಷರ ದಾಸೋಹ ಯೋಜನೆ ಕಾರ್ಯಕ್ರಮದ ಬಗ್ಗೆ

269 (588) ಶ್ರೀ ಬಚ್ಚೇಗೌಡ ಕೆ.ಪಿ (ಚಿಕ್ಕಬಳ್ಳಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?